ಶ್ರೀ ಎಂ. ಪಿ. ಪ್ರಕಾಶ್.—ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗೆ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆನ್ನುವುದೇ ಸರ್ಕಾರದ ಒಂದು ದೊಡ್ಡ ಮೈಲಿಗಲ್ಲು. ಮಾನ್ಯ ಸದಸ್ಯರು ಇವರೆಲ್ಲಿ ಸರ್ಕಾರಕ್ಕೆ ನಂಬಿಕೆ ಇದೆಯೇ ಎಂದು ಕೇಳುವ ಪ್ರಶ್ನೆ ಅಗತ್ಯವಿಲ್ಲ. ಇದರಲ್ಲಿ ನಮಗೆ ಸಂಪೂರ್ಣ ನಂಬಿಕೆ ಇದೆ. ಪದಾಧಿಕಾರಿಗಳು ಮತ್ತು ಆಡಳಿತಾತ್ಮಕ ತೊಂದರೆ ಅಂದರೆ ನಿಯೋಜನೆ ಮಾಡತಕ್ಕ ಸಂದರ್ಭದಲ್ಲಿ ತಡವಾಗಿ ಬಂದಿದ್ದಾರೆ. ಅನುಭವದ ತೊಂದರೆಯ ಕಾರಣದಿಂದ ಹಣದ ಬಿಡುಗಡೆಯಾಗುವ ಸಂದರ್ಭದಲ್ಲಿ ತೊಂದರೆಯಾಗಿದೆ. ಇನ್ನು ಖಾಲಿ ಹುದ್ದೆಗಳನ್ನು ತುಂಬುವುದಕ್ಕೆ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಅಡ್ಯಂತಾಯ ಅವರೆ ತಮ್ಮ ಪ್ರಶ್ನೆಗೆ ಸಮಯ ಬೇಕೆಂದು ಕೇಳಿದ್ದಾರೆ.

ಶ್ರೀ ಎನ್. ಎಂ. ಅಡ್ಯಂತಾಯ.— ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಪ್ರತಿಸಲ ಸಮಯ ಕೇಳುತ್ತಿದ್ದಾರೆ, ಕಾರಣ ಏನು ಗೊತ್ತಾಗಲಿಲ್ಲ.

ಅಧ್ಯಕ್ಷರು.—ನಿಮ್ಮ ಪ್ರಶ್ನೆ ಬಹಳ ಮಹತ್ವದ್ದು ಇರುತ್ತದೆ.

ಶ್ರೀ ಎನ್. ಎಂ. ಅಡ್ಯಂತಾಯ.—ಟೈಮ್ ಕೊಡುವುದಿಲ್ಲ, ಟೈಮ್ ಬಾಂಡ್ ಆದರೂ ಮಾಡಿಬಿಡಿ.

ಅಧ್ಯಕ್ಷರು.—ಮಾನ್ಯ ದೇವಪಾಂಡೆಯವರೇ, ಮಾನ್ಯ ಸದಸ್ಯರಿಗೆ ಯಾವಾಗ ಉತ್ತರ ತರಿಸಿ ಕೊಡುತ್ತೀರಿ ?

ಶ್ರೀ ಆರ್, ವಿ. ದೇಶಪಾಂಡೆ —ಅಧ್ಯಕ್ಷರೇ, ಆದಷ್ಟು ಬೇಗ ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಮಾನ್ಯ ಅಡ್ಯಂತಾಯ ಅವರೇ, ನಾನು ನಿಮ್ಮ ಪರವಾಗಿ ಆದಷ್ಟು ಬೇಗ ಉತ್ತರ ತರಿಸಿಕೊಡಲಿಕ್ಕೆ ಹೇಳುತ್ತೇನೆ, ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಎನ್. ಎಂ. ಅಡ್ಯಂತಾಯ.—ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ಪ್ರಶ್ನೆ.

ಅಧ್ಯಕ್ಷರು.—ಅಸೆಂಬ್ಲಿ ಮುಗಿದರೂ ಕೂಡ ನಾನು ತಮಗೆ ಉತ್ತರ ಕಳುಹಿಸಿಕೊಡುತ್ತೇನೆ. ತಾವು ದಯಮಾಡಿ ಕುಳಿತುಕೊಳ್ಳಿ.

ಕರ್ನಾಟಕ ಗೃಹ ಮಂಡಳಿಯವರು ಹರಪನ ಹಳ್ಳಿಯಲ್ಲಿ ಕಟ್ಟಿಸಿದ ಎಲ್‌ಐಜಿ ಮನೆಗಳ ಬಗೆ

೪೦೪೮. ಶ್ರೀ ಬಿ. ಹೆಚ್. ಯಂಕನಾಯ್ಕ (ಹರಪನ ಹಳ್ಳಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಗೃಹ ಮಂಡಳಿಯವರು ಹರಪನಹಳ್ಳಿಯಲ್ಲಿ ಕಟ್ಟಿಸಿರುವ ಎಲ್‌ಐಜಿ ಮನೆಗಳನ್ನು ಮಂಜೂರು ಮಾಡುವಾಗ ನಿಗದಿಪಡಿಸಿದ ಮೊತ್ತ ರೂ. ೨೨,೦೦೦.೦೦ ಸ್ವಾಧೀನಕ್ಕೆ ಕೊಡುವ ಸಮಯದಲ್ಲಿ ರೂ. ೫೫,೦೦೦.೦೦ಕ್ಕೆ ಏರಿಸಿರುವುದು ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ರೀತಿಯ ಏರಿಕೆಯಿಂದ ಬಡವರಿಗೆ ಬಹಳ ತೊಂದರೆ ಉಂಟು ಮಾಡುವುದು ನಿಜವೇ ?

ಇ) ಹಾಗಿದ್ದಲ್ಲಿ, ಇಂತಹ ಪ್ರಕರಣಗಳಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ರಿಯಾಯ್ತಿಗಳನ್ನು ಕೊಟ್ಟು ರೂ. ೨೨,೦೦೦ಕ್ಕೆ ಮನೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ ?

ಈ) ಈಗ ಎಲ್‌ಐಜಿ ಮನೆಗಳನ್ನು ದಾವಣಗೆರೆ ಹಾಗೂ ಕೊಟ್ಟೂರುಗಳಲ್ಲಿ ರೂ. ೨೨,೦೦೦ಕ್ಕೆ ಮಂಜೂರು ಮಾಡುವುದು ನಿಜವೇ ?

ಶ್ರೀ ಆರ್.ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ಮನೆಯ ನಿರ್ಮಾಣ ಕಾರ್ಯವು ಕೆಲವು ಕಾರಣಾಂತರಗಳಿಂದ ನಿಗದಿತ ಅವಧಿಯಲ್ಲಿ ಮುಕ್ತಾಯವಾಗದೆ ಇದ್ದುದರಿಂದ ಮೊದಲು ನಿಗದಿಪಡಿಸಿದ ಮನೆಯ ತಾತ್ಕಾಲಿಕ ಬೆಲೆಯನ್ನು ಅನಿವಾರ್ಯ ಕಾರಣಗಳಿಂದ ಏರಿಸಬೇಕಾಗಿರುವುದು.

ಇ) ಗೃಹ ಮಂಡಳಿಯ ನಿಯಮಾವಳಿಗಳ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ಪಂಗಡಗಳಿಗೆ ಸೇರಿದ ಹಂಚಿಕೆದಾರರಿಗೆ ಮನೆಯ ಒಟ್ಟು ಬೆಲೆಯಲ್ಲಿ ಶೇಕಡ ೧೦ ರಷ್ಟನ್ನು ಮಾತ್ರ ೫ ತಿಂಗಳ ಅವಧಿಯೊಳಗೆ ಪಾವತಿ ಮಾಡಿಸಿಕೊಳ್ಳಲಾಗುವುದು. ಬಾಕಿ ಶೇಕಡ ೯೦ ರಷ್ಟು ಹಣವನ್ನು ಮನೆಯ ಗುತ್ತಿಗೆಯ ಅವಧಿಯಲ್ಲಿ ಪಾವತಿ ಮಾಡಲು ಅವಕಾಶವಿದೆ. ಇದರ ಹೊರತು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ಪಂಗಡಗಳಿಗೆ ಸೇರಿದ ಹಂಚಿಕೆದಾರರಿಗೆ ಬೇರೆಯಾ ರೀತಿಯಲ್ಲಿ ರಿಯಾಯಿತಿಯನ್ನು ಕೊಡಲು ಅವಕಾಶವಿರುವುದಿಲ್ಲ.

ಈ) ದಾವಣಗೆರೆ ನಗರದಲ್ಲಿ ೧೯೮೦ರಲ್ಲಿ ಜಕ್ಕಳೂರು ರಸ್ತೆಯಲ್ಲಿ ಕಡಿಮೆ ಆದಾಯ ವರ್ಗದಲ್ಲಿ ಹಂಚಿಕೆಯಾದ ಮನೆಗೆ ತಾತ್ಕಾಲಿಕವಾಗಿ ೨೧,೦೦೦ ರೂ.ಗಳೆಂದೂ ಮತ್ತು ಕೂಡ್ಲಿಗಿ ತಾಲ್ಲೂಕು ಕೂಟ್ಟೂರಿನಲ್ಲಿ ೧೯೮೪ರಲ್ಲಿ ಹಂಚಿಕೆಯಾದ ಕಡಿಮೆ ಆದಾಯ ವರ್ಗದ ಮನೆಗೆ ೨೦,೫೫೮ ರೂ.ಗಳೆಂದು ಮನೆಯ ಬೆಲೆಯಲ್ಲಿ ನಿಗದಿಪಡಿಸಲಾಗಿದೆ, ಈ ಮನೆಗಳ ಅಂತಿಮ ಬೆಲೆಯನ್ನು ಇನ್ನೂ ನಿರ್ಧಾರ ಮಾಡಿರುವುದಿಲ್ಲ.

ಶ್ರೀ ಬಿ.ಹೆಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೆ, ಗೃಹಮಂಡಲಿಯವರು ಹರಪನ ಹಳ್ಳಿಯಲ್ಲಿ ಕಟ್ಟಿಸಿರುವ ಎಲ್.ಐ.ಜಿ. ಮನೆಗಳನ್ನು ಮಂಜೂರು ಮಾಡುವಾಗ ನಿಗದಿಪಡಿಸಿದ ಮೊತ್ತ ೨೨ ಸಾವಿರ ರೂಪಾಯಿಗಳು. ಆದರೆ ಆ ಮನೆಗಳನ್ನು ಸ್ವಾಧೀನಕ್ಕೆ ಕೊಡುವಾಗ ೫೫ ಸಾವಿರ ರೂಪಾಯಿಗಳಿಗೆ ಏರಿಸಿದ್ದಾರೆ. ಈ ರೀತಿ ಏರಿಸಿದ್ದಕ್ಕೆ ಕಾರಣವೇನು? ಇದರಿಂದ ಬಡವರಿಗೆ ತೊಂದರೆಯಾಗುವುದಿಲ್ಲವೇ? ಇಷ್ಟೊಂದು ಹೆಚ್ಚಿಗೆ ಆಗಬೇಕಾದರೆ ಅಧಿಕಾರಿಗಳು ಹಣವನ್ನು ತಿಂದಿದ್ದಾರೆಯೆ? ಅಥವಾ ಗುತ್ತಿಗೆದಾರರು ತಿಂದಿದ್ದಾರೆಯೆ? ಮೊದಲು ೫೦೦ ರೂ ಗಳ ಡಿಪಾಜಿಟ್‌ನ್ನು ಕಟ್ಟಿಸಿಕೊಂಡಿದ್ದರು, ಅವರಿಗೆ ಕೊಟ್ಟಿರತಕ್ಕ ಮನೆಗಳು ಬಹಳ ಸಣ್ಣವು. ಆ ಜನ ಬಹಳ ಬಡವರು, ಅವರು ಕಟ್ಟಿರತಕ್ಕ ಹಣಕ್ಕೆ ಬಡ್ಡಿಯನ್ನು ಸೇರಿಸಿ ಕೊಡಿಸಿ. ಇಲ್ಲದಿದ್ದರೆ ಅವರ ಹಣವನ್ನು ವಾಪಸು ಆದರೂ ಕೊಡಿಸಿ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ೧೯೭೪–೭೫ನೇ ಇಸವಿಯಲ್ಲಿ ಟಿ.ಎಂ. ಸದಾಶಿವ ಎನ್ನುವ ಒಬ್ಬ ಗುತ್ತಿಗೆದಾರ ೨೫ ಪರ್ಸೆಂಟ್ ಹಣವನ್ನು ಮನೆ ಕಟ್ಟುವುದಕ್ಕಾಗಿ ತೆಗೆದುಕೊಂಡ. ಆದರೆ ಅವನು ಕೆಲಸ ಮಾಡಲಿಲ್ಲ. ಅವನು ಕೆಲಸವನ್ನು ಬಿಟ್ಟುಮೇಲೆ ನಾವು ೪ ಸಾರಿ ಟೆಂಡರನ್ನು ಇದೇ ಕೆಲಸಕ್ಕೆ ಕರೆದೆವು. ಇದರಿಂದಾಗಿ ಹೆಚ್ಚಿಗೆ ಖರ್ಚು ಬಂತು. ಇದನ್ನು ಕಾಂಪೆನ್‌ಸೇಟ್ ಮಾಡುವುದಕ್ಕೆ ಸಾಧ್ಯವಿಲ್ಲ. ಸಬ್ಸಿಡಿ ಕೊಡುವುದಕ್ಕೆ ಹೌಸಿಂಗ್‌ಬೋರ್ಡ್‌ನಲ್ಲಿ ಹಣ ಇಲ್ಲ. ನಿಜವಾಗಿ ಆ ಮನೆಗಳನ್ನು ನಿರ್ಮಿಸುವುದಕ್ಕೆ ಎಷ್ಟು ಖರ್ಚು ಬಿದ್ದಿದೆ ಅಷ್ಟು ಹಣವನ್ನು ಅವರು ಕೊಡಲೇಬೇಕು. ಆದರೆ ಇಷ್ಟಾದರೂ ಹಿಂದೆ ಗೃಹಮಂಡಲಿಯಿಂದ ಮನೆಗಳನ್ನು ನಿರ್ಮಾಣ ಮಾಡಿ ಕೊಡುವ ಬಗ್ಗೆ ಎಷ್ಟು ಹಣಕ್ಕೆ ಕಟ್ಟಿ ಕೊಡುತ್ತೇವೆಂದು ಅಗ್ರಿಮೆಂಟ್ ಮಾಡಿಕೊಂಡಿರುತ್ತೇವೋ ಅಷ್ಟೇ ಹಣವನ್ನು ಅದರಿಂದ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು —ಹಿಂದಸಗೇರಿಯವರೇ, ತಾವು ತಮ್ಮ ಪ್ರಶ್ನೆಯನ್ನು ಕೇಳಿ.

ಶ್ರೀ ಬಿ.ಹೆಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೆ, ನಾನು ಇನ್ನೂ ಮಾನ್ಯ ಸಚಿವರನ್ನು ಪ್ರಶ್ನೆ ಕೇಳಬೇಕಾಗಿದೆ.....

ಅಧ್ಯಕ್ಷರು.—ಯಂಕಾನಾಯ್ಕರವರೇ, ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ನಾನು ಈಗಾಗಲೇ ಮಾನ್ಯ ಹಿಂಡಸಗೇರಿಯವರನ್ನು ಕರೆದಿದ್ದೇನೆ.

ಶ್ರೀ ಬಿ.ಹೆಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೆ, ಬಡವರಿಗೆ ಅನ್ಯಾಯವಾಗಿದೆ. ಇದು ಬಹಳ ಮುಖ್ಯವಾದ ಪ್ರಶ್ನೆ. ದಯವಿಟ್ಟು ಅವಕಾಶ ಕೊಡಿ. ಮಾನ್ಯ ಮಂತ್ರಿಗಳು ಅಲ್ಲಿಗೆಹೋಗಿ ನೋಡಿಕೊಂಡು ಬಂದರೆ ಗೊತ್ತಾಗುತ್ತದೆ. ಇವರು ಕಟ್ಟಿಸಿರುವ ಮನೆಗಳಿಗೆ ಕಿಟಕಿ ಬಾಗಿಲುಗಳೂ ಸಹ ಸರಿಯಾಗಿಲ್ಲ.

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ.ಹೆಚ್. ಯಂಕಾನಾಯ್ಕ.—ಮೊದಲು ೨೨ ಸಾವಿರ ರೂಪಾಯಿಗೆ ಕೊಡುತ್ತೇವೆ ಎಂದು ಹೇಳಿದ್ದರು. ಈಗ ೫೩ ಸಾವಿರ ರೂಪಾಯಿಗಳೆಂದು ಹೇಳುತ್ತಿದ್ದಾರೆ. ಆದ್ದರಿಂದ ಅವರು ಕಟ್ಟಿರುವ ರೊಕ್ಕವನ್ನಾದರೂ ವಾಪಸು ಕೊಡಿಸಿ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ, ಸಬ್ಸಿಡಿ ಕೊಡುವುದಕ್ಕೆ ಹೌಸಿಂಗ್‌ಬೋರ್ಡ್‌ನಲ್ಲಿ ಹಣವಿಲ್ಲ. ಇನ್ನು ಮುಂದೆ ಈ ರೀತಿ ಆಗುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಬಯಸುತ್ತೇನೆ. ೭೪ ಮನೆಗಳನ್ನು ನಿರ್ಮಾಣ ಮಾಡಬೇಕಾಗಿದ್ದ ೫-೬ ಸಾರಿ ಟೆಂಡರ್‌ವನ್ನು ಕರೆದಿದ್ದೇವೆ. ಸಬ್ಸಿಡಿ ಕೊಡುವುದಕ್ಕೆ ಹೌಸಿಂಗ್‌ಬೋರ್ಡ್‌ನಲ್ಲಿ ಹಣ ಇಲ್ಲ. ಉದ್ದೇಶಪೂರ್ವಕವಾಗಿ ಹಣವನ್ನೇನೂ ಹೆಚ್ಚಿಗೆ ಖರ್ಚು ಮಾಡಿಲ್ಲ. ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಇದರಲ್ಲಿ ಕಂಟ್ರಾಕ್ಟರ್‌ಗಳ ತಪ್ಪಿದೆಯೆ ? ಅಥವಾ ಅಧಿಕಾರಿಗಳ ತಪ್ಪಿದೆಯೇ ? ಎಂಬುದನ್ನು ಹೇಳಿ.

ಶ್ರೀ ಆರ್.ವಿ. ದೇಶಪಾಂಡೆ.—ಕಂಟ್ರಾಕ್ಟರ್ ೨೫ ಪರ್ಸೆಂಟ್ ಹಣವನ್ನು ತೆಗೆದುಕೊಂಡು ಹೋಗಿದ್ದಾನೆ. I will find out a way and see if I can solve it. ಅಧಿಕಾರಿಗಳ ಮೇಲೆ ನಾವು ಯಾವರೀತಿ ಕ್ರಮ ತೆಗೆದುಕೊಳ್ಳುವುದಕ್ಕಾಗುತ್ತದೆ ?

ಶ್ರೀ ಬಿ.ಹೆಚ್. ಯಂಕಾನಾಯಕ್.—ಇದರಲ್ಲಿ ಯಾರ ತಪ್ಪಿದೆ ? ಆ ಬಡವರು ಕಟ್ಟಿರುವ ದುಡ್ಡಿಗೆ ಬಡ್ಡಿಯನ್ನಾದರೂ ಕೊಡಿಸಿ.

ಅಧ್ಯಕ್ಷರು.—ಯಂಕಾನಾಯ್ಕರೆ, ದಯವಿಟ್ಟು ಕೂಡಿ. ನಿಮಗೆ ಮತ್ತೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನ್ನ ಛೇಂಬರ್‌ಗೆ ಬಂದು ನನ್ನನ್ನು ಭೇಟಿ ಮಾಡಿದರೆ ಅವರ ಪ್ರಾಬ್ಲಂ ಏನು ಇದೆ ಅದನ್ನು ಸಾಲ್ವ್ ಮಾಡುತ್ತೇನೆ.

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಪ್ರದೇಶಕ್ಕೆ ನೀರು ಸರಬರಾಜು ಬಗ್ಗೆ

೨೯೩. ಶ್ರೀ ಎ, ಎಂ. ಹಿಂಡಸಗೇರಿ (ಹುಬ್ಬಳ್ಳಿ). ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಪ್ರದೇಶಕ್ಕೆ ನೀರು ಸರಬರಾಜು ಆಗುತ್ತಿರುವ ಬಗ್ಗೆ ಧಾರವಾಡ ಜಿಲ್ಲಾಧಿಕಾರಿಗಳು ವರದಿಯನ್ನು ಸಲ್ಲಿಸಿರುತ್ತಾರೆಯೆ :

೨ ಈ ರೀತಿಯ ಅನಾರೋಗ್ಯಕರ ನೀರನ್ನು ಹುಬ್ಬಳ್ಳಿ ಧಾರವಾಡಗಳ ಜನತೆಗೆ ಸರಬರಾಜ ಆಗುತ್ತಿರುವ ಹೊಣೆಯನ್ನು ಕರ್ತವ್ಯ ಚ್ಯುತಿ ಅಧಿಕಾರಿಗಳ ಮೇಲೆ ಧಾರವಾಡ ಜಿಲ್ಲಾಧಿಕಾರಿಗಳು ಹೊರಿಸಿದ್ದಾರೆಯೇ :

೩ ಹಾಗಿದ್ದಲ್ಲಿ, ಅಂತಹ ಅಧಿಕಾರಿಗಳ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧ ಹೌದು

೨ ಹೌದು

೩ ಇಬ್ಬರು ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲಾಯಿತು. ಅದರಲ್ಲಿ ಒಬ್ಬ ಮಂಡಲಿಯ ಅಧಿಕಾರಿಯನ್ನು ಬಾಕಿ ಇರುವ ವಿಚಾರಣೆ ಮೇಲೆ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲಾಯಿತು.

ಶ್ರೀ ಎ. ಎಂ. ಹಿಂಡಸಗೇರಿ.—ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆ ಪ್ರದೇಶಕ್ಕೆ ಅನಾರೋಗ್ಯಕರವಾದ ನೀರನ್ನು ಸರಬರಾಜು ಮಾಡಿದ್ದರಿಂದ ಅಲ್ಲಿನ ಜನರಿಗೆ ಬಹಳ